# ‘ನಂಬರ್ ಒನ್’ ಸ್ಟೀವ್ ಸ್ಮಿತ್



ಈ ವರ್ಷ ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಹೊಡೆದಿರುವ ಸ್ಟೀವ್ ಸ್ಮಿತ್, ವಿಶ್ವ ಕ್ರಿಕೆಟಿಗರ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಈಗ ‘ನಂಬರ್ ಒನ್’. ಈ ಸ್ಥಾನದಲ್ಲಿದ್ದ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿಯನ್ನು ಎರಡನೇ ಸ್ಥಾನಕ್ಕೆ ತಳ್ಳಿರುವ ಸ್ಮಿತ್, ಈ ಸಾಧನೆ ಮಾಡಲು ತೆಗೆದುಕೊಂಡದ್ದು ನೇರ ಐದು ಇನಿಂಗ್ಸ್! ಕಳೆದ ಒಂದೇ ತಿಂಗಳಲ್ಲಿ ನಡೆದ ಟೆಸ್ಟ್‌ಗಳಲ್ಲಿ ಸ್ಮಿತ್ ಗಳಿಸಿರುವ ರನ್‌ಗಳು– 144, 142, 92 ಮತ್ತು 211. ಹೀಗೆ ಒಂದೇ ಸಮನೆ ಶತಕ, ದ್ವಿಶತಕಗಳನ್ನು ಹೊಡೆದ ಕಾರಣದಿಂದಲೇ ರಾಂಕಿಂಗ್‌ನಲ್ಲಿ ದಿಢೀರ್ ಏರಿಕೆ ಕಂಡಿದೆ. ಸದ್ಯಕ್ಕೆ ಸ್ಮಿತ್ ಆಸ್ಟ್ರೇಲಿಯಾದ ಕ್ರಿಕೆಟ್‌ಪ್ರಿಯರ ಡಾರ್ಲಿಂಗ್.

ಈ ವರ್ಷ ಈತನ ರನ್ ಸರಾಸರಿ 147.25 ಎನ್ನುವುದು ಈತನ ನಾಗಾಲೋಟವನ್ನು ಸೂಚಿಸುತ್ತಿದೆ. ಉಳಿದ ಯಾವ ಆಟಗಾರರೂ ಇದರ ಅರ್ಧದಷ್ಟು ಸರಾಸರಿಯನ್ನೂ ಸಾಧಿಸಲಾಗಿಲ್ಲ.

ಇಂಗ್ಲೆಂಡ್– ಆಸ್ಟ್ರೇಲಿಯಾ ನಡುವಣ ಆ್ಯಷಸ್ ಸರಣಿಯಲ್ಲಿ ಸ್ಮಿತ್ ಈಗಾಗಲೆ ಮೂರು ದ್ವಿಶತಕಗಳನ್ನು ದಾಖಲಿಸಿದ್ದಾನೆ. ಡಾನ್ ಬ್ರಾಡ್ಮನ್ (8) ಮತ್ತು ವಲ್ಲಿ ಹ್ಯಾಮಂಡ್ (4) ಅವರನ್ನು ಬಿಟ್ಟರೆ ಈತನದ್ದೇ ಅತ್ಯಧಿಕ ದ್ವಿಶತಕ. ಇಂಗ್ಲೆಂಡ್ ವಿರುದ್ಧ ಈತ ಒಟ್ಟು 11 ಶತಕಗಳನ್ನು ದಾಖಲಿಸಿದ್ದಾನೆ. ಇಂಗ್ಲೆಂಡ್ ವಿರುದ್ಧ ಬ್ರಾಡ್ಮನ್ ಅವರ 19 ಶತಕ, ವೆಸ್ಟ್‌ಇಂಡೀಸ್ ವಿರುದ್ಧ ಸುನಿಲ್ ಗಾವಸ್ಕರ್‌ರ 13 ಶತಕ ಮತ್ತು ಆಸ್ಟ್ರೇಲಿಯಾ ವಿರುದ್ಧ ಜಾಕ್ ಹಾಬ್ಸ್ 12 ಶತಕಗಳನ್ನು ಹೊಡೆದಿದ್ದಾರೆ. ದೇಶವೊಂದರ ವಿರುದ್ಧ ಅತ್ಯಧಿಕ ಶತಕ ಹೊಡೆದ ನಾಲ್ಕನೇ ಸ್ಥಾನ ಈತನದ್ದು. ಇಂಗ್ಲೆಂಡ್ ನೆಲದಲ್ಲಿ ಆಸ್ಟ್ರೇಲಿಯಾ ಪರ ಕಳೆದ 25 ವರ್ಷಗಳಿಂದ ಯಾರೂ ದ್ವಿಶತಕ ಹೊಡೆದಿಲ್ಲ. ಈಗ ಈ ದಾಖಲೆಯೂ ಸ್ಮಿತ್ ಹೆಸರಲ್ಲಿದೆ.

ಮೊದಲ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ಸರಾಸರಿ 93.64 ರನ್ ದಾಖಲಿಸಿರುವುದು ಈತನ ಹೆಗ್ಗಳಿಕೆ. 113.66 ರನ್ ಬ್ಯಾಟಿಂಗ್ ಸರಾಸರಿ ಡಾನ್ ಬ್ರಾಡ್ಮನ್ ದಾಖಲೆ. ಆ್ಯಶಸ್ ಸರಣಿಯಲ್ಲಿ ಸತತ ಮೂರು ವರ್ಷ ಒಟ್ಟು 500 ರನ್‌ಗಳ ದಾಟಿರುವ ಹೆಗ್ಗಳಿಕೆಯೂ ಸ್ಮಿತ್‌ನದ್ದು. 2015ರಲ್ಲಿ ಇಂಗ್ಲೆಂಡ್‌ನಲ್ಲಿ ಆ್ಯಶಸ್ ಸರಣಿ ನಡೆದಾಗ ಸ್ಮಿತ್ ಒಟ್ಟು 508 ರನ್ ಹೊಡೆದಿದ್ದರು. 2017–18ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಸರಣಿಯಲ್ಲಿ 687 ರನ್ ಹೊಡೆದಿದ್ದಾರೆ. ಈಗ ಆ್ಯಶಸ್ ಸರಣಿಯಲ್ಲಿ ಮತ್ತೆ 500 ರನ್‌ಗಳ ಗಡಿ ದಾಟಿದ್ದಾರೆ. ಬ್ರಾಡ್ಮನ್ ಕೂಡಾ ಈ ದಾಖಲೆ ಮಾಡಿಲ್ಲ. ಆದರೆ ಬ್ರಾಡ್ಮನ್, ವಿವಿಧ ದೇಶಗಳ ವಿರುದ್ಧ ಸರಣಿಯಲ್ಲಿ 5 ಬಾರಿ 500 ರನ್‌ಗಳ ಗಡಿ ದಾಟಿದ್ದುಂಟು. ಹೀಗೆಂದೇ ಸ್ಮಿತ್‌ನನ್ನು ಈಗ ಎಲ್ಲರೂ ಡಾನ್ ಬ್ರಾಡ್ಮನ್‌ಗೆ ಹೋಲಿಸುತ್ತಿದ್ದಾರೆ. ‘ಹಿಂದೆ ನೀವು ಬ್ರಾಡ್ಮನ್ ಆಟವನ್ನು ನೋಡಿಲ್ಲ ಎಂದಾದರೆ ಈಗ ಈತನ ಆಟವನ್ನು ನೋಡಿ’ ಎನ್ನುತ್ತಿದ್ದಾರೆ. ಆಸ್ಟ್ರೇಲಿಯಾದ ಪರ ಟೆಸ್ಟ್ ಸರಾಸರಿ ರನ್ ಗಳಿಕೆಯಲ್ಲಿ ಅಗ್ರಸ್ಥಾನ ಬ್ರಾಡ್ಮನ್ (99.94 ರನ್) ಅವರದ್ದೇ. ಅದು ಬಿಟ್ಟರೆ ಈಗ ಸ್ಟೀವ್ ಸ್ಮಿತ್‌ನದ್ದು (64.64).

30ರ ಹರೆಯದ ಸ್ಮಿತ್ ಕ್ರಿಕೆಟ್ ಜೀವನದ ಏರುಪೇರು, ಒಂದು ಸಿನಿಮಾದ ಕಥೆಯಂತಿದೆ. 2010ರಲ್ಲಿ ಈತ ಆಸ್ಟ್ರೇಲಿಯಾದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿದ್ದು ಬಲಗೈ ಲೆಗ್‌ಸ್ಪಿನ್ನರ್ ಆಗಿ. ಆದರೆ ಈಗ ಈತ ತಂಡದ ಪ್ರಮುಖ ಬ್ಯಾಟ್ಸ್‌ಮನ್. ಆರಂಭದ ಎರಡು ವರ್ಷ ತಂಡದಲ್ಲಿ ಗ್ಯಾರಂಟಿ ಸ್ಥಾನ ಇರಲಿಲ್ಲ. 2013ರಲ್ಲಿ ಈತ ಆಸ್ಟ್ರೇಲಿಯಾ ತಂಡದ ಖಾಯಂ ಆಟಗಾರನಾದ. ಸತತ ಸಾಧನೆಯಿಂದ 2015ರಲ್ಲಿ ಆಸ್ಟ್ರೇಲಿಯಾ ತಂಡದ ಕ್ಯಾಪ್ಟನ್ ಆದ.

2018ರ ಮಾರ್ಚ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಮೂರನೇ ಟೆಸ್ಟ್ ಪಂದ್ಯದಲ್ಲಿ ಚೆಂಡನ್ನು ವಿರೂಪಗೊಳಿಸಿದ ಆರೋಪ ಎದುರಿಸಿ ನಾಯಕತ್ವ ಕಳೆದುಕೊಂಡ. ತನಿಖೆ ನಡೆಸಿ ತಪ್ಪಿತಸ್ಥ ಎಂದಾದಾಗ ಒಂದು ವರ್ಷ ಎಲ್ಲ ರೀತಿಯ ಕ್ರಿಕೆಟ್ ಪಂದ್ಯಗಳಿಂದಲೂ ಈತನನ್ನು ನಿಷೇಧಿಸಲಾಯಿತು. ಆಗ ‘ಚೆಂಡು ತಿದ್ದಿದ್ದು ತಪ್ಪಾಗಿದೆ’ ಎಂದು ಬಹಿರಂಗವಾಗಿಯೇ ಕಣ್ಣೀರು ಹಾಕಿದ್ದ ಸ್ಮಿತ್. ನಿಷೇಧ ಮುಗಿದ ಬಳಿಕ ಮತ್ತೊಂದು ವರ್ಷ ಆಸ್ಟ್ರೇಲಿಯಾದ ನಾಯಕನಾಗುವಂತಿಲ್ಲ ಎಂದೂ ಷರತ್ತು ವಿಧಿಸಲಾಗಿತ್ತು. ಎಲ್ಲರೂ ಸ್ಮಿತ್ ಕಥೆ ಮುಗಿಯಿತೆಂದೇ ಭಾವಿಸಿದ್ದರು. 2018ರಲ್ಲಿ ಟೆಸ್ಟ್ ತಂಡಕ್ಕೆ ಮರಳಿದ ಸ್ಮಿತ್, ಈಗ ಮತ್ತೆ ಆಸ್ಟ್ರೇಲಿಯಾದ ಕಪ್ತಾನ! ಈ ಮಧ್ಯೆ ಜೋಫ್ರಾ ಆರ್ಚರ್‌ನ ಬೌನ್ಸರ್ ಕುತ್ತಿಗೆಯ ಮೇಲ್ಭಾಗಕ್ಕೆ ಬಡಿದು ಆಸ್ಪತ್ರೆ ಸೇರಿದ. ಮೆದುಳು ಕೆಲಸ ಮಾಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿದ ಹಿನ್ನೆಲೆಯಲ್ಲಿ ಒಂದು ಟೆಸ್ಟ್‌ನಿಂದ ಈತನನ್ನು ಕೈಬಿಡಲಾಗಿತ್ತು. ಇಂತಿರ್ಪ ಸ್ಮಿತ್ ಈಗ ಆಸ್ಟ್ರೇಲಿಯಾದ ಕ್ರಿಕೆಟ್‌ಪ್ರಿಯರ ಸೂಪರ್‌ಹೀರೊ.

ಸ್ಮಿತ್ ಭಾರತೀಯರಿಗೂ ಪರಿಚಿತ. 2010ರಲ್ಲಿ ಐಪಿಎಲ್ ಆಡಲು ಬಂದಾಗ ಈತ ಆರ್‌ಸಿಬಿ ತಂಡ ಸೇರಿದ್ದ. 2012ರಲ್ಲಿ ನಡೆದ ಬಿಡ್‌ನಲ್ಲಿ ಈತ ಅನ್‌ಸೋಲ್ಡ್! ಬಳಿಕ ರಾಜಸ್ಥಾನ ರಾಯಲ್ಸ್ ಸೇರಿ ಆ ತಂಡದ ಕ್ಯಾಪ್ಟನ್ ಕೂಡಾ ಆಗಿದ್ದ. ಇನ್ನೂ ಐದಾರು ವರ್ಷ ಕ್ರಿಕೆಟ್ ಆಡುವ ಈತನ ಹುಮ್ಮಸ್ಸು ನೋಡಿದರೆ ಡಾನ್ ಬ್ರಾಡ್ಮನ್‌ರ ಕೆಲವು ದಾಖಲೆಗಳನ್ನಾದರೂ ಈತ ಪುಡಿಗಟ್ಟುವ ಸಾಧ್ಯತೆ ಇದೆ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65